# “ಥೂ ಹಾಳು ಗಣಿತ....”

**ಸೌಜನ್ಯ : ವಿ.ಎಸ್.ಎಸ್. ಶಾಸ್ತ್ರಿ, ಕೋಲಾರ**
**9448714793**

....ಹೀಗೆಂದು ತನ್ನ ಕೈಯಲ್ಲಿದ್ದ ಪುಸ್ತಕವನ್ನು ರೊಯ್ಯನೆ ಗೋಡೆಗೆಸೆದ ಸುರೇಶ. ಆ ಗಣಿತ ಪುಸ್ತಕ ಗೋಡೆಗೆ ಅಪ್ಪಳಿಸಿ ಕೆಳಗೆ ಬಿತ್ತು. ಸುರೇಶನಿಗೆ ಹಾಯೆನ್ನಿಸಿತು. ಕೋಪ ಹಾರಿ ಹೋಗಿತ್ತು. ಅಮ್ಮನಿಗೆ ನಾನು ಎಸೆದದ್ದು ಗೊತ್ತಾದರೆ ಎಂದು ಭಯವಾಯಿತು. ತಕ್ಷಣ ಪುಸ್ತಕವನ್ನು ತೆಗೆದುಕೊಂಡು ಬಂದು ತನ್ನ ಮುಂದಿಟ್ಟುಕೊಂಡ. “ಚರಿತ್ರೆ ಪುಸ್ತಕ ಎಷ್ಟು ಚೆನ್ನಾಗಿ ಓದಿಸಿಕೊಂಡು ಹೋಗುತ್ತವೆ, ವಿಜ್ಞಾನದ ಪುಸ್ತಕದಲ್ಲಿ ಚಿತ್ರಗಳು ಎಷ್ಟು ಚೆನ್ನಾಗಿವೆ, ಕನ್ನಡ ಪುಸ್ತಕದಲ್ಲಿ ಎಷ್ಟು ಕಥೆಗಳಿವೆ. ಈ ಹಾಳು ಗಣಿತದಷ್ಟು ಒಣ ವಿಷಯ ಪುಸ್ತಕ ಇನ್ನೊಂದಿಲ್ಲ.” ಹೀಗೆಂದು ತನಗೆ ತಾನೇ ಹೇಳಿಕೊಂಡ. ಹಾಗೆಯೇ ಯೋಚಿಸುತ್ತಾ ನಿದ್ದೆ ಮಾಡಿದ.

ಆಮೇಲೆ ಎದ್ದು ವಾಕಿಂಗ್ ಹೊರಟ. ಮಂದವಾದ ಬೆಳಕು, ತಂಪಾದ ಗಾಳಿ, ಏರಿ ಬರುವ ಅಲೆಗಳ ಸಪ್ಪಳ. ಒದ್ದೆಯಾದ ಕಾಲುಗಳ ಕೆಳಗೆ ಮರಳು. ಹಿತವಾದ ಜುಳು-ಜುಳು ಸದ್ದು; ಸುರೇಶ ಕೆರೆಯ ಏರಿಯ ಮೇಲೆ ನೋಡುತ್ತಿದ್ದಂತೆಯೇ, ಸಂನ್ಯಾಸಿಯೊಬ್ಬ ಎದುರಿಗೆ ಬಂದ. ಬಹಳ ಚುರುಕಾಗಿ ನಡೆಯುತ್ತಿದ್ದ “ಯಾರೋ ಹೊಸಬರು” ಎಂದು ಸುರೇಶ ಯೋಚಿಸುತ್ತಿದ್ದಂತೆಯೇ, ಆ ಸಂನ್ಯಾಸಿ ಹತ್ತಿರಕ್ಕೆ ಬಂದು, “ನಮಸ್ಕಾರ” ಎಂದ. ಸುರೇಶ ಗಾಬರಿಯಿಂದ ನಮಸ್ಕರಿಸಿದ. “ನಾನು ಈ ಊರಿಗೆ ಹೊಸಬ, ನಾನು ಒಂದು ಅಡ್ರೆಸ್ ಹುಡುಕುತ್ತಿದ್ದೇನೆ, ನೀವು ಸಹಾಯ ಮಾಡಬಹುದೆ?” ಎಂದ ಸಂನ್ಯಾಸಿ, “ಖಂಡಿತ ಮಾಡುತ್ತೇನೆ. ಇಲ್ಲಿ ಒಂದು ಬೆಂಚ್ ಇದೆ. ಕುಳಿತುಕೊಳ್ಳೋಣ ಬನ್ನಿ” ಎಂದು ಕೈ ತೋರಿಸಿದ. ಆ ಸಂನ್ಯಾಸಿಯೇ ಚಕ ಚಕ ನಡೆದು ಬೆಂಚ್‌ನ ಮೇಲೆ ಮೊದಲು ಕುಳಿತುಬಿಟ್ಟ. “ನಾನು ಬಹಳ ಸುತ್ತಾಡಿದ್ದೇನೆ. ಅನೇಕ ಊರುಗಳನ್ನು ನೋಡಿದ್ದೇನೆ. ನನ್ನ ಹೆಸರು ಗಣಿತಾನಂದ.”

“ಹ್ಹಾ ಗಣಿತಾನಂದ! ಹೀಗೂ ಹೆಸರು ಇರುತ್ತಾ!”

“ಯಾಕಪ್ಪ ಗಾಬರಿ. ನನ್ನ ಹೆಸರೇ ಅದು.”

“ನನಗೆ ಗಣಿತ ಅಂದರೇನೇ ದ್ವೇಷ. ಇಷ್ಟಕ್ಕೂ ಅದರಿಂದ ಪ್ರಯೋಜನವೇನು ಬಿಡಿ, ನನಗೆ ಬೇರೆ ವಿಷಯಗಳು ಇಷ್ಟವಾಗುತ್ತವೆ.”

“ಈಗ ನನಗೆ ಆಶ್ಚರ್ಯವಾಗ್ತಾ ಇದೆ. ಗಣಿತವನ್ನು ದ್ವೇಷಿಸುವವರೂ ಇದ್ದಾರೆಯೆ?”

“ಖಂಡಿತಾ ಇದ್ದಾರೆ. ನಾನೇ ನಿಮ್ಮ ಮುಂದಿದ್ದೇನೆ.”

“ಇರಲಿ ಬಿಡಪ್ಪಾ. ಈಗ ದ್ವೇಷ, ಪ್ರೀತಿ ಮಾತೇಕೆ. ಇನ್ನೇನಾದರೂ ಮಾತಾಡೋಣ. ನಾನು ಹೀಗೇ ನಡೆದುಕೊಂಡು ಬರ್ತಿರೋವಾಗ ಅಲ್ಲಿ ಮೊಬೈಲ್ ಟವರ್ ನಿಲ್ಲಿಸ್ತಾ ಇದ್ರು. ದೊಡ್ಡ ಕ್ರೇನ್ ಅಲ್ಲಿತ್ತು” ಎಂದರು.



“ಹೌದು ಈಗ ಎಲ್ಲ ಕಡೆ ಟವರ್ ನಿಲ್ಲಿಸ್ತಾ ಇದ್ದಾರೆ. ಕನೆಕ್ಟಿವಿಟಿ ಸಿಗಬೇಕಲ್ಲ.”

“ನಾನು ಅವರನ್ನು ಕೇಳಿದ್ದು ಬೇರೆ. ನಾನು ಇಡೀ ದೇಶ ಸುತ್ತಿದ್ದೇನೆ. ಕೆಲವು ಕಡೆ ಮೊಬೈಲ್ ಟವರ್‌ಗಳೇ ಇರೋದಿಲ್ಲ. ಇನ್ನು ಕೆಲವು ಕಡೆ ಹೆಜ್ಜೆಗೊಂದು ಸಿಗುತ್ತೆ ಏಕೆ ಹೀಗೆ” ಎಂದೆ.

“ಹೌದಲ್ಲಾ. ನನಗೂ ಇದೇ ಯೋಚನೆ ಇತ್ತು” ಎಂದ ಸುರೇಶ.

“ನನಗೆ ಆ ಮೊಬೈಲ್ ಟವರ್ ಎಂಜಿನಿಯರ್ ಹೇಳಿದ್ದು ಆಶ್ಚರ್ಯ ತಂದಿತು.”

“ಏನು ಹೇಳಿದರು ಅವರು.”

“ನಾವು ಇದಕ್ಕೊಂದು ಫಾರ್ಮುಲಾ ಇಟ್ಟುಕೊಂಡಿದ್ದೇವೆ. ಅದನ್ನು ಉಪಯೋಗಿಸಿ ಟವರ್ ಹಾಕ್ತೇವೆ” ಎಂದರು.

“ಯಾವ ಫಾರ್ಮುಲಾನಪ್ಪ” ಎಂದೆ.

“ಅದೇ ಸಾರ್ ನೀವು ಹೈಸ್ಕೂಲಿನಲ್ಲಿ ನ್ಯೂಟನ್ನನ ಗುರುತ್ವಾಕರ್ಷಣೆ ಫಾರ್ಮುಲ ಬಳಸ್ತೀರಲ್ಲ. ಅದೇ!”

$$F = \frac{Gm_1m_2}{r^2}$$

“.... ಇದೇ ಫಾರ್ಮುಲಾನೇ”

“ಹೌದು. ಇದರಲ್ಲಿ ಕೊಂಚ ಬದಲಾವಣೆ ಮಾಡಿಕೋಳ್ತೇವೆ.

$$N = \frac{KP_1P_2}{d^2}$$

N = ಎರಡು ಟವರ್ ನಡುವೆ ಪ್ರತಿದಿನ ಇರಬಹುದಾದ ಕಾಲ್‌ಗಳು.

$P_1P_2$ = ಎರಡು ಟವರ್‌ಗಳು ಇರುವ ಜಾಗದಲ್ಲಿ ಇರುವ ಜನಸಂಖ್ಯೆ

d = ಎರಡು ಸ್ಥಳಗಳ ನಡುವಿನ ಅಂತರ.

$P_1P_2$ ಗಳನ್ನು ಸಾವಿರಗಳ ಲೆಕ್ಕದಲ್ಲಿ ತೆಗೆದುಕೊಳ್ಳುತ್ತೇವೆ. d ಯನ್ನು ಮೈಲಿಗಳಲ್ಲಿ ಎಣಿಸುತ್ತೇವೆ."

"ನಮ್ಮ ಗ್ರಾವಿಟಿ ಫಾರ್ಮುಲಾ ಇದಕ್ಕೂ ಬಳಕೆ ಆಗುತ್ತಾ. ಆಶ್ಚರ್ಯವಾಗುತ್ತೆ" ಎಂದ ಸುರೇಶ.

"ನನಗೂ ಆಶ್ಚರ್ಯವಾಯ್ತಪ್ಪ. ಇಲ್ಲಿ 'K' ಎಂದರೆ ಎಷ್ಟು ಎಂದು ಕೇಳಿದೆ?"

ಅದಕ್ಕವರು, "ಈಗಾಗಲೇ ಟವರ್ ನಿಲ್ಲಿಸಿರುವ ಕಡೆಯಿಂದ $P_1P_2d_1N$ ಗಳನ್ನು ಹಾಕಿ 'K' ಪಡೆಯುತ್ತೇವೆ. ಅದು ಈ ರಾಜ್ಯದಲ್ಲಿ 400 ಆಗಿದೆ" ಎಂದ.

"ನನಗೆ ಈ ವಿಷಯ ಗೊತ್ತೇ ಇರಲಿಲ್ಲ" ಎಂದ ಸುರೇಶ.

"ನನಗೂ ಅಷ್ಟೆ. ಇನ್ನೂ ಕೇಳು, ನೀವು ಟವರ್ ನಿಲ್ಲಿಸ್ತೀರಲ್ಲ ಅದರ ಲೆಕ್ಕ ಹೇಗೆ" ಎಂದೆ.

"ಟವರ್ ನಿಲ್ಲಿಸೋ ಲೆಕ್ಕ ಅಂದರೆ" ಎಂದ ಸುರೇಶ.

"ಎಷ್ಟು ಎತ್ತರಕ್ಕೆ; ಕೆಳಗಿನ ತಳ ಎಷ್ಟು ಅಗಲ ಇರಬೇಕು ಎನ್ನುವ ಲೆಕ್ಕ. ಎತ್ತರದ ಟವರ್ ಗಾಳಿಗೆ ಅಲುಗಾಡಿ ನೆಲ ಕಚ್ಚಬಾರದಲ್ಲ"

"ಹೌದು ಹೌದು ಟವರ್ ಬಿದ್ದರೆ ಏನು ಗತಿ" ಎಂದ ಸುರೇಶ.

"ಅವನು ಹೇಳಿದ್ದು ಎಷ್ಟು ಸರಳ ಅನ್ನಿಸ್ತು."

"ಏನೆಂದ"

"ಸಿಗ್ನಲ್ ಎಷ್ಟು ಎತ್ತರದಲ್ಲಿ ಸಿಗುತ್ತೆ ಅಂತ ಟೆಸ್ಟ್ ಮಾಡ್ತೀವಿ. ಆ ಎತ್ತರವನ್ನು ಸೆಂಟಿಮೀಟರಿನಲ್ಲಿ ಕಾಗದದ ಮೇಲೆ ಲಂಬಗೆರೆ ಹಾಕಿಕೋಳ್ತೀವಿ. ತುದಿಯಿಂದ $15^0$ ಅಚೀಚೆ ಗೆರೆ ಎಳೆದರೆ. ಒಂದು ಸಮಬಾಹು ತ್ರಿಭುಜ ಸಿಗುತ್ತೆ. ಇದರ ತಳ ಅಳೆದರೆ ಆಯಿತು" ಎಂದ.

"ಇಷ್ಟೇನಾ. ನಾನು ಇದನ್ನು 8ನೇ ಕ್ಲಾಸ್‌ನಲ್ಲೇ ಓದಿದ್ದೆ" ಎಂದ ಸುರೇಶ.

"ನನಗೂ ಹಾಗೇ ಅನ್ನಿಸ್ತು. ನಾನು $15^0$ ನೇ ಯಾಕೆ? ಅಂದೆ. ಅದು ನಮ್ಮ ಅನುಭವದಿಂದ ಬಂದಿದೆ ಸಾರ್ ಎಂದು ಹೇಳಿದ. ಇದೂ ಮುಖ್ಯ ಅಲ್ಲವೇ" ಎಂದರು ಗಣಿತಾನಂದರು.




ಚಿತ್ರ-2. ಮೊಬೈಲ್ ಟವರ್

"ಸರಿ ನಿಮಗೆ ಗಣಿತಾನಂದ ಅಂತ ಹೆಸರು ಏಕಿದೆ ಅಂತ ಗೊತ್ತಾಯ್ತು. ಎಷ್ಟೊಂದು ಗಣಿತ ಗೊತ್ತಿದೆ" ಎಂದ ಸುರೇಶ.

"ನನಗೇನು ಗಣಿತ ಗೊತ್ತಿದೆಯಪ್ಪಾ. ನಾನು ಓದಿದ್ದು ಕಡಿಮೆ. SSLC ವರೆಗೆ ಮಾತ್ರ. ಅದೇ ಗಣಿತ ಮೊಬೈಲ್ ಟವರ್‌ಗೆ ಬಳಕೆಯಾಗತ್ತಲ್ಲಾ ಅಂತ ಖುಷಿಯಾಯ್ತು."



“ನನಗೂ ಅಷ್ಟೇ ಆಶ್ಚರ್ಯ. ಅವರು ಏನೋ ದೊಡ್ಡ ಗಣಿತ ಬಳಸ್ತಾರೆ ಅಂದುಕೊಂಡಿದ್ದೆ.”

“ನೀನು ಈ ನಡುವೆ ಕೆಎಸ್‌ಆರ್‌ಟಿಸಿ ಬಸ್‌ಸ್ಟಾಂಡಿಗೆ ಹೋಗಿದ್ದೆಯೇನಪ್ಪ?”

“ಹೋಗಿದ್ದೀನಿ”

‘‘ನೋಡು, ಮೊದಲು ಬಸ್ ಸ್ಟ್ಯಾಂಡ್‌ನಲ್ಲಿ ಬಸ್‌ಗಳನ್ನು ಲಂಬವಾಗಿ ನಿಲ್ಲಿಸ್ತಾ ಇದ್ದರು. ಈ ಖಾಸಗಿ ಬಸ್ ನಿಲ್ದಾಣಗಳಿರುತ್ತಲ್ಲ ಹಾಗೆ. ಆದರೆ ಈಗ $60^0$ ಕೋನದಲ್ಲಿ ನಿಲ್ಲಿಸ್ತಾರೆ. ಗಮನಿಸಿದ್ದೀಯ.”



ಚಿತ್ರ-4. ಬಸ್ ಸ್ಟ್ಯಾಂಡ್

“ಬಸ್‌ಗಳನ್ನು ಕ್ರಾಸ್ ಆಗಿ ನಿಲ್ಲಿಸ್ತಾರೆ ಅಂತಗೊತ್ತು. ಅದು $60^0$ ಅಂತ ಗೊತ್ತಿರಲಿಲ್ಲ.”

“ಇದು ಯಾಕೆ ಅಂದ್ರೆ ಬಸ್‌ಗಳು ನಿಲ್ದಾಣದ ಒಳಗೆ ಬರುವಾಗ ಸಮಬಾಹು ತ್ರಿಕೋನದ ಹೊರಕೋನ. ಅಂದರೆ $120^0$ ಟರ್ನ್‌ಗಳಲ್ಲಿ ಚಲಿಸಿ ನಿಲ್ದಾಣದ ಜಾಗದಲ್ಲಿ ನಿಲ್ಲುತ್ತೆ.”

“ಅಂದರೆ”

“ಬಸ್ ಲಂಬವಾಗಿ ನಿಲ್ಲಬೇಕಾದ್ರೆ $90^0$ ವಕ್ರವಾಗಿ ನಿಲ್ಲಬೇಕು. ಇದು ಕಷ್ಟ. ಆದರೆ $120^0$ ಸಲೀಸಾಗಿ ಟರ್ನ್ ಮಾಡಬಹುದು. ಬಸ್ ಹೊರಗೆ ತೆಗೆಯುವಾಗಲೂ ಅಷ್ಟೆ. $90^0$ ಟರ್ನ್‌ಗಿಂತ $120^0$ ಟರ್ನ್ ಸುಲಭ.”

“ಕೆಎಸ್‌ಆರ್‌ಟಿಸಿಯವರು ಇದನ್ನೆಲ್ಲಾ ಮಾಡ್ತಾರಾ?”

“ಖಂಡಿತಾ ಮಾಡಿದ್ದಾರೆ. ಕೆಎಸ್‌ಆರ್‌ಟಿಸಿಯವರೇ ಅಲ್ಲ. ರೈಲ್ವೆಯವರೂ ಹೀಗೆ ಮಾಡಿದ್ದಾರೆ.”

“ರೈಲ್ವೆಯವರು ಏನು ಮಾಡಿದ್ದಾರೆ ಸಾರ್.”

“ನೀನು ನಿಮ್ಮ ಊರಿನ ರೈಲ್ವೆ ನಿಲ್ದಾಣ ನೋಡಿಲ್ಲವೆ? ಒಮ್ಮೆ ಹೋಗಿ ನೋಡು.”

“ಸಾರ್ ನೀವೇ ಸ್ವಲ್ಪ ಹೇಳಿ”

“ನಿಮ್ಮ ಊರು ಕೋಲಾರದಲ್ಲಿ ನ್ಯಾರೋ ಗೇಜ್ ರೈಲು ಬಂದದ್ದು 1910ರಲ್ಲಿ. ಬಂಗಾರಪೇಟೆಯಿಂದ ಕೋಲಾರಕ್ಕೆ ಬಂದ ರೈಲು ಮತ್ತೆ ಬಂಗಾರಪೇಟೆಗೆ ಹೋಗಬೇಕಾಗಿತ್ತು.

ಆಗೆಲ್ಲಾ ಸ್ಟೀಮ್ ಎಂಜಿನ್ನಗಳೇ ಇದ್ದದ್ದು. ಅವಕ್ಕೆ ಗೇರ್ ಬಾಕ್ಸ್‌ಗಳು ಇರುತ್ತಿರಲಿಲ್ಲ. ಮತ್ತೆ, ಎಂಜಿನ್ ಒಮ್ಮುಖವಾಗಿ ಮಾತ್ರ ಚಲಿಸುತ್ತಿತ್ತು. ಹಿಮ್ಮುಖ ಚಲನೆ ಬಹಳ ದೂರಕ್ಕೆ ಅಸಾಧ್ಯವಾಗುತ್ತಿತ್ತು."



**ಚಿತ್ರ-4.**

"ಹೌದು. ಇಷ್ಟೆಲ್ಲಾ ಕಷ್ಟ ಇತ್ತಾ"

"ಹೌದು. ಹಾಗಾಗಿ ಬಂಗಾರಪೇಟೆಯಿಂದ ಬಂದ ರೈಲನ್ನು ಪ್ಲಾಟ್‌ಫಾರಂನಲ್ಲಿ ನಿಲ್ಲಿಸಿ, ಎಂಜಿನ್ ಕಳಚಿ, ಅದನ್ನು ಮತ್ತೆ ಬಂಗಾರಪೇಟೆಯ ಕಡೆ ಮುಖ ತಿರುಗಿಸಬೇಕಾಗುತ್ತಿತ್ತು. ಅದಕ್ಕೆ ಅವರು ಹೀಗೆ ಮಾಡುತ್ತಿದ್ದರು." ಗಣಿತಾನಂದರು ನೆಲದ ಮೇಲೆ ಕಡ್ಡಿಯಿಂದ ಒಂದು ಚಿತ್ರ ಬರೆದರು.

"ಬಂಗಾರಪೇಟೆಯಿಂದ ಬಂದ ರೈಲು ಪ್ಲಾಟ್‌ಫಾರಂನಲ್ಲಿ ನಿಂತಾಗ. ಕಳಚಿದ ಎಂಜಿನ್ C ಯಿಂದ D ಗೆ ಚಲಿಸುತ್ತಿತ್ತು ಬಳಿಕ ಹಿಮ್ಮುಖವಾಗಿ D ಯಿಂದ E ಗೆ ಬಂದು F ಗೆ ಹೋಗಿ ನಿಲ್ಲುತ್ತಿತ್ತು. ಮತ್ತು F ನಿಂದ B ಗೆ ಬಂದು, A ವರೆಗೂ ಸಾಗಿ ನಿಂತು, ಹಿಮ್ಮುಖವಾಗಿ A ಯಿಂದ B ಗೆ ಬರುತ್ತಿತ್ತು. ಅಲ್ಲಿ ನಿಂತಿದ್ದ ರೈಲು ಬೋಗಿಗಳಿಗೆ ಲಿಂಕ್ ಮಾಡುತ್ತಿತ್ತು. ಈಗ ಬರುವಾಗ ಕೋಲಾರದ ಕಡೆಗಿದ್ದ ಎಂಜಿನ್ ಬಂಗಾರಪೇಟೆಗೆ ತಿರುಗುತ್ತಿತ್ತು."

"ಅಬ್ಬಾ ಎಂತಹ ಟೆಕ್ನಿಕ್ ಅಲ್ವಾ"

"ಟೆಕ್ನಿಕ್ ಇರಲಿ. ಇದರಲ್ಲಿನ ಗಣಿತ ನೋಡು"

"ಇಲ್ಲೇನು ಗಣಿತ ಇದೆ ಸಾರ್"

"ಯಾಕಪ್ಪ ಇಡೀ ಚಲನೆ ಒಂದು ತ್ರಿಕೋನದ ಹಾಗೆ ಕಾಣುವುದಿಲ್ಲವೇ?"

"ಹೌದಲ್ಲಾ. ನಾನು ಗಮನಿಸಿರಲಿಲ್ಲ. ತ್ರಿಕೋನದ ಚಲನೆಯಲ್ಲಿ ಎಂಜಿನ್ ರಿವರ್ಸ್ ಆಗುತ್ತಲ್ಲಾ ಸಾರ್"

"ಯಾಕೆ ಆಗುತ್ತೆ ಗೊತ್ತಾ. ತ್ರಿಕೋನ ಒಳಕೋನಗಳ ಮೊತ್ತ $180^0$. ಅದರ ಹೊರ ಕೋನಗಳ ಮೊತ್ತ $360^0$. ಅದಕ್ಕಾಗಿಯೇ ಎಂಜಿನ್ ತನ್ನ ಅಕ್ಷದ ಮೇಲೆ ಒಂದು ಸುತ್ತು ಹೊಡೆದ ಹಾಗೆ ಆಗುತ್ತೆ."

"ಓಹೋ ಗೊತ್ತಾಯ್ತು ಬಿಡಿ. ಆದರೆ ರೈಲ್ವೆನವರು ನಮ್ಮ ಏಳನೆಯ ತರಗತಿಯ ತ್ರಿಕೋನದ ಗಣಿತ ಬಳಸಿದ್ದಾರೆ."

"ಹೌದು ಚೆನ್ನಾಗಿಲ್ಲವೆ?" ಸುರೇಶನಿಗೆ ಅದೇನೋ ಖುಷಿ. ಗಣಿತಾನಂದರೊಂದಿಗೆ ಬಹಳಹೊತ್ತು ಮಾತನಾಡುತ್ತಿದ್ದ, ಕತ್ತಲಾಯಿತು. "ಸಾರ್ ಮನೇಲಿ ಕಾಯ್ತಾ ಇರ್ತಾರೆ" ಅಂತ ಓಟ ಕಿತ್ತ.